ಕರ್ನಾಟಕ ಸರಕಾರ

ಜಿಲ್ಲಾಧಿಕಾರಿ ಹಾಗೂ ಜಿಲ್ಲಾ
ದಂಡಾಧಿಕಾರಿಯವರ ಕಾರ್ಯಾಲಯ,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು – 575001.

Deputy Commissioner &
District Magistrate's Office,
Dakshina Kannada,
Mangaluru-575001.

ಟ್ಯಾಕ್ಸ್/16011/ಸಿಆರ್ 90/E-113656/2020/ /ಡಿ3

ದಿನಾಂಕ: 24-11-2020

ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯವರ ನಡವಳಿ

ವಿಷಯ: ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 2016 ರ ಕಲಂ 40(1) ನಿಯಮ 25 ರಡಿ ದಂಡ/ಪರಿಹಾರದ ಮೊತ್ತವನ್ನು ಭೂ ಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲಾತಿ ಸಂಬಂಧ ನೋಡೆಲ್ ಅಧಿಕಾರಿಯನ್ನು ನೇಮಿಸುವ ಬಗ್ಗೆ.

ಉಲ್ಲೇಖ:1) ಸರ್ಕಾರದ ಪತ್ರ ಸಂ:ಕಂಇ/48/ಟಿಆರ್ ಎಂ/2020, ದಿನಾಂಕ:251-10-2020

2) ಈ ಕಛೇರಿಯ ಪತ್ರ ಸಂಖ್ಯೆ: ಟ್ಯಾಕ್ಸ್/16011/ಸಿಆರ್ 1/E-86482/2020/ /ಡಿ3 ದಿ:31-01-2020, 29-10-2020

3) ಈ ಕಛೇರಿಯ ಪತ್ರ ಸಂಖ್ಯೆ: ಟ್ಯಾಕ್ಸ್/16011/ಸಿಆರ್ 87/E-112903/2020/ /ಡಿ3 ದಿನಾಂಕ: 29-10-2020

-::-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಭಾರತ ಸರ್ಕಾರವು ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯ್ದೆ 2016 ರ ಕಲಂ 31 ರ ಪ್ರಕಾರ ವಿಚಾರಣೆ ಮಾಡಿ, ಆದೇಶದಂತೆ ಅಭಿವೃದ್ಧಿದಾರರು/ಪರಿಹಾರ ಪಾವತಿಸಲು ವಿಫಲರಾದಂತಹ ಪ್ರಕರಣಗಳನ್ನು ಕಾಯ್ದೆ 2016 ರ ಕಲಂ 40(1) ಹಾಗೂ ನಿಯಮ 25 ರ ಪ್ರಕಾರ ದಂಡ/ಪರಿಹಾರ ಮೊತ್ತವನ್ನು ಭೂಕಂದಾಯ ಬಾಕಿ ವಸೂಲಿ ಮಾಡಲು ಆದೇಶಿಸಿ ತೀರ್ಪುಗಳನ್ನು ಹೊರಡಿಸಲಾಗಿದ್ದು, ಅಂತಹ ಪ್ರಕರಣಗಳನ್ನು ಭೂಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲಿ ಮಾಡಲು ಸೂಚನೆ ನೀಡುವಂತೆ ಕೋರಿರುವ ಪ್ರಯುಕ್ತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ಕಂದಾಯ ಬಾಕಿ ವಸೂಲು ಮಾಡಲು ಒಟ್ಟು ಮೊತ್ತ ರೂ.20,52,216/- ಬಾಕಿ ಇರುತ್ತದೆ ಎಂದು ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ ತಿಳಿಸಿರುವ ಪ್ರಯುಕ್ತ ಸದರಿ ಪ್ರಾಧಿಕಾರದ ಭೂಕಂದಾಯ ಬಾಕಿಯನ್ನು ಕಾಲಮಿತಿಯೊಳಗೆ ವಸೂಲಿ ಮಾಡಲು ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:05-10-2020 ರಂದು ನಡೆದ ಸಭೆಯಲ್ಲಿ ಸೂಚಿಸಲಾಗಿರುತ್ತದೆ.

ಸದರಿ ಸಭೆಗೆ ಸಂಬಂಧಿಸಿದ ಉಲ್ಲೇಖ(1)ರ ನಡವಳಿಯಲ್ಲಿ ಭೂ ಕಂದಾಯ ಬಾಕಿ ವಸೂಲಾತಿ ಸಂಬಂಧ ರೇರಾ ಪ್ರಾಧಿಕಾರದಲ್ಲಿ ಮತ್ತು ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನೋಡೆಲ್ ಅಧಿಕಾರಿಯವರನ್ನು ನೇಮಕ ಮಾಡಲು ಸೂಚಿಸಿರುವ ಪ್ರಯುಕ್ತ ಈ ಕಛೇರಿಯ ಶ್ರೀಮತಿ ಅನಿತಾಲಕ್ಷ್ಮೀ. ಎಸ್., ಎಲೆಕ್ಷನ್ ತಹಶೀಲ್ದಾರ್, ದ.ಕ.ಜಿಲ್ಲಾಧಿಕಾರಿಯವರ ಕಛೇರಿ ಇವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದೆ. ಸದರಿ ಪ್ರಕರಣಗಳಿಗೆ ಸಂಬಂಧಿಸಿ ವಸೂಲಾತಿಗೆ ತುರ್ತು ಕ್ರಮ ಕೈಗೊಳ್ಳುವ ಬಗ್ಗೆ ಮೇಲ್ವಿಚಾರಣೆ ನಡೆಸುವಂತೆ ಸೂಚಿಸಿದೆ.

ತಮ್ಮ ವಿಶ್ವಾಸಿ,
24/11
ಜಿಲ್ಲಾಧಿಕಾರಿ
ದಕ್ಷಿಣ ಕನ್ನಡ ಜಿಲ್ಲೆ,ಮಂಗಳೂರು
24/11/2020

ಸಂಬಂಧಪಟ್ಟ ಅಧಿಕಾರಿಯವರಿಗೆ

ಪ್ರತಿ:-1) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು -560 001 ಇವರಿಗೆ ಮಾಹಿತಿಗಾಗಿ.

2) ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು ಇವರಿಗೆ ಮಾಹಿತಿಗಾಗಿ.

3) ಕಾರ್ಯದರ್ಶಿ, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ನಂ.1/14, 2ನೇ ಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯೂನಿಟಿ ಬಿಲ್ಡಿಂಗ್ ಹಿಂಭಾಗ, ಸಿ.ಎಸ್.ಐ.ಕಾಂಪೌಂಡ್, 3ನೇ ಕ್ರಾಸ್, ಮಿಷನ್ ರಸ್ತೆ, ಬೆಂಗಳೂರು-560 027ಇವರಿಗೆ ಮಾಹಿತಿಗಾಗಿ

4) ತಹಶೀಲ್ದಾರ್ ಬಂಟ್ವಾಳ ಇವರಿಗೆ ಮಾಹಿತಿಗಾಗಿ.